ಉತ್ತರ

ಅ) ಸೂಕ್ತ ಕಟ್ಟಡ ಹಾಗೂ ಸ್ಥಳಾವಕಾಶ ದೊರೆಯದೆ ಇರುವುದರಿಂದ ಚಾಮರಾಜನಗರದಲ್ಲಿ ಸಿವಿಲ್ ಜಡ್ಜ್ (ಹಿರಿಯ ವಿಭಾಗ) ಮತ್ತು ಜಿಲ್ಲಾ ನ್ಯಾಯಾಲಯವನ್ನು ಸ್ಥಾಪಿಸಲಾಗಿರುವುದಿಲ್ಲ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಇಲ್ಲ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಬೈಂದೂರು ಕ್ಷೇತ್ರದಲ್ಲಿ ಅಗ್ನಿಶಾಮಕ ಕೇಂದ್ರ ಸ್ಥಾಪಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:936(271)

ಸದಸ್ಯರ ಹೆಸರು: ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು)

ಪ್ರಶ್ನೆ

ಅ) ಬೈಂದೂರು ವಿಧಾನ ಸಭೆ ಕ್ಷೇತ್ರದ ಶಿರೂರು, ಕುಂದಾಪುರದಿಂದ 45 ಕಿ.ಮಿ. ದೂರವಿದೆ. ಕುಂದಾಪುರದಲ್ಲಿ ಅಗ್ನಿಶಾಮಕ ಕೇಂದ್ರವಿದ್ದು, ಶಿರೂರಿನಲ್ಲಿ ಯಾವುದೇ ಅನಾಹುತ ಸಂಭವಿಸಿದಲ್ಲಿ ಆ ಸ್ಥಳಕ್ಕೆ ಹೋಗುವಾಗ ಸಂಪೂರ್ಣ ನಾಶಗೊಂಡಿರುತ್ತದೆ. ಆದ್ದರಿಂದ ಬೈಂದೂರು ಕ್ಷೇತ್ರದಲ್ಲಿ ಒಂದು ಅಗ್ನಿಶಾಮಕ ಕೇಂದ್ರವನ್ನು ಸ್ಥಾಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಉತ್ತರಿಸುವ ಸಚಿವರು: ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಉತ್ತರ

ಅ) ಬೈಂದೂರು, ಭಟ್ಕಳ ಅಗ್ನಿಶಾಮಕ ಠಾಣೆಗೆ ಕೇವಲ 18 ಕಿ.ಮಿ. ದೂರದಲ್ಲಿರುವ ಕುಂದಾಪುರ ಅಗ್ನಿಶಾಮಕ ಠಾಣೆಗೆ 30 ಕಿ.ಮಿ. ದೂರವಿರುವುದರಿಂದ ಬೈಂದೂರಿನಲ್ಲಿ ಅಗ್ನಿಶಾಮಕ ಠಾಣೆಯನ್ನು ಸದ್ಯಕ್ಕೆ ಸ್ಥಾಪಿಸುವ ಅವಶ್ಯಕತೆ ಇರುವುದಿಲ್ಲ.

ತೆರಿಗೆ ಸಂಗ್ರಹದ ವಿವರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 937(1302)

ಸಭಾಧ್ಯಕ್ಷರು ಕೆಸರು: ಶ್ರೀ ಹಂಪನಗೌಡ ಬಾದರ್ಲಿ(ಸಿಂಧನೂರು)

ಪ್ರಶ್ನೆ

ಅ. 1-4-2000 ರಿಂದ 15-02-2001ರವರೆಗೆ ಹಾಗೂ 1999-2000 ಗಳಲ್ಲಿ ಮದ್ಯ, ಬೀರ್, ವೈನ್ ಮತ್ತು ಇಂತಹದ್ದೇ ಪೇಯಗಳಿಂದ ವಾಣಿಜ್ಯ ತೆರಿಗೆ ಇಲಾಖೆಯು ಒಟ್ಟು ವಾರ್ಷಿಕ ವಾಣಿಜ್ಯ ತೆರಿಗೆ ರೂ.6275.27ರ ಪೈಕಿ ಮದ್ಯದ ಮೇಲೆ ರೂ.341.2 ಕೋಟಿ ಸಂಗ್ರಹಿಸಿರುವುದು ನಿಜವೇ. ಇದೇ ಅವಧಿಗೆ ಮದ್ಯದ ಮೇಲೆ ಅಬಕಾರಿ ಇಲಾಖೆ ಸಂಗ್ರಹಿಸುತ್ತಿದ್ದ ಅಬಕಾರಿ ಸುಂಕ ಎಷ್ಟು?

ಆ. ಮದ್ಯದ ಮೇಲಿನ ಮಾರಾಟ ತೆರಿಗೆಯನ್ನು ರದ್ದುಗೊಳಿಸಿ ಅಬಕಾರಿ ಸುಂಕವೊಡನೆ ಸಂಯೋಜಿಸಿದಾಗ ಪ್ರತಿ ತಿಂಗಳು 15-02-2001ರಿಂದ ವಸೂಲಿಯಾದ ಮದ್ಯದ ಮೇಲಿನ ಅಬಕಾರಿ ಸುಂಕ ಎಷ್ಟು?

ಉತ್ತರಿಸುವ ಸಚಿವರು: ಶ್ರೀ ಎಂ.ಎಂ.ನಾಣಯ್ಯ(ಅಬಕಾರಿ ರಾಜ್ಯ ಸಚಿವರು)

ಉತ್ತರ

ಅ. 1-4-2000 ರಿಂದ 15-2-2001ರ ವರೆಗೆ ಹಾಗೂ 1999-2000 ಗಳಲ್ಲಿ ಮದ್ಯ ಬೀರ್, ವೈನ್ ಮತ್ತು ಇಂತಹದ್ದೇ ಪೇಯಗಳಿಂದ ವಾಣಿಜ್ಯ ತೆರಿಗೆ ಇಲಾಖೆಯು ಸಂಗ್ರಹಣೆ ಮಾಡಿರುವ ತೆರಿಗೆ ಹಾಗೂ ಇದೇ ಅವಧಿಗೆ ಮದ್ಯದ ಮೇಲೆ ಅಬಕಾರಿ ಇಲಾಖೆ ಸಂಗ್ರಹಿಸುತ್ತಿದ್ದ ಅಬಕಾರಿ ಸುಂಕದ ವಿವರ ಕೆಳಕಂಡಂತಿದೆ:

(ರೂ.ಕೋಟಿಗಳಲ್ಲಿ)

ವರ್ಷ	ಅಬಕಾರಿ ಇಲಾಖೆ ಸಂಗ್ರಹಿಸಿದ ಮದ್ಯದ ಸುಂಕ	ವಾಣಿಜ್ಯ ತೆರಿಗೆ ಇಲಾಖೆ ಸಂಗ್ರಹಿಸಿದ ಮಾರಾಟ ತೆರಿಗೆ	ಒಟ್ಟು
1999-2000	187.02	323.64	510.66
2000-2001	211.30	296.83*	508.13

*ವಾಸ್ತವವಾಗಿ 2000-2001ನೇ ಸಾಲಿನಲ್ಲಿ ದಿನಾಂಕ: 15-2-2001ರವರೆಗೆ ವಾಣಿಜ್ಯ

ತೆರಿಗೆ ಇಲಾಖೆ ಸಂಗ್ರಹಿಸಿದ್ದು ರೂ.296.83 ಕೋಟಿಗಳು. ಆದರೆ ಹಳೆ ಬಾಕಿ, ಬಡ್ಡಿ ಇತ್ಯಾದಿ ರೂ.44.90 ಕೋಟಿಗಳನ್ನು ಆ ಇಲಾಖೆ ದಿ: 15-2-2001ರ ನಂತರದ ಅವಧಿಯಲ್ಲಿ ಸಂಗ್ರಹಿಸಿದೆ.

ಆ. ವಿವರಗಳು ಕೆಳಕಂಡಂತಿದೆ:

ತಿಂಗಳು	ಅಬಕಾರಿ ಸುಂಕ (ಹೆಚ್ಚುವರಿ ಅಬಕಾರಿ ಸುಂಕ ಸೇರಿ) ಸಂಗ್ರಹಣೆ (ಕೋಟಿ ರೂ.ಗಳಲ್ಲಿ)
ಫೆಬ್ರವರಿ-2001 (16-2-2001 ರಿಂದ)	34.04
ಮಾರ್ಚ್-2001	52.41
ಏಪ್ರಿಲ್-2001	42.67
ಮೇ-2001	52.96
ಜೂನ್-2001	48.42
ಜುಲೈ-2001	45.89
ಆಗಸ್ಟ್-2001	52.61
ಸೆಪ್ಟಂಬರ್-2001	55.02
ಅಕ್ಟೋಬರ್-2001	54.00
ನವೆಂಬರ್-2001	56.83
ಡಿಸೆಂಬರ್-2001	55-58
ಒಟ್ಟು	550.43